<u>ತೀರ್ಥಹಳ್ಳಿಯ ಹಿರಿಯ ವ್ಯವಾಹರ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯದಲ್ಲಿ</u>

<u>ಸಿ.ಸಿ. ಸಂಖ್ಯೆ: **14/2024**</u>

| | | |
|---|---|---|
| ಪಿರ್ಯಾದುದಾರರು | ವಿರುದ್ಧ | ಆರೋಪಿ |
| ಆಗುಂಬೆ ಪೋಲೀಸ್ | | ಜಿ ಡಿ ಉಮೇಶ |

ದೋಷಾರೋಪಣೆ

ಶ್ರೀಮತಿ ಗೀತಾಮಣಿ ಬಿ ಎ., ಎಲ್‌ಎಲ್.ಬಿ, ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ, ತೀರ್ಥಹಳ್ಳಿ ಆದ ನಾನು

ಆರೋಪಿ : ಜಿ.ಡಿ. ಉಮೇಶ ಬಿನ್ ಐ.ಜಿ.ದುಗ್ಗಪ್ಪ ನಾಯ್ಕ
ವಯಸ್ಸು 60 ವರ್ಷ
ವಾಸಃ ಗುಜುಗೋಳಿ, ಬಾಳೆಹಳ್ಳಿ ಗ್ರಾಮ,
ತೀರ್ಥಹಳ್ಳಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.

ನಿಮ್ಮ ಮೇಲೆ ಹೊರಿಸುವ ಆರೋಪಣೆ ಏನೆಂದರೆ,

ತೀರ್ಥಹಳ್ಳಿ ತಾಲ್ಲೂಕಿನ ಆಗುಂಬೆ ಪೊಲೀಸ್ ಠಾಣಾ ಸರಹದ್ದಿನ ಬಾಳೆಹಳ್ಳಿ ಗ್ರಾಮದ ಗಣಗಲು ವಾಸಿ ಆರೋಪಿಯಾದ ನೀವು ತಮಗೆ ಸೇರಿದ ಬಾಳೆಹಳ್ಳಿ ಗ್ರಾಮದ ಸ ನಂ **184/2** ರಲ್ಲಿರುವ **30** ಗುಂಟೆ ಬಾಗಾಯ್ತು ಜಮೀನನ್ನು ಕ್ರಯಕ್ಕೆ ಕೊಡುವುದಾಗಿ ನಂಬಿಸಿ ಸಾಕ್ಷಿ-**01** ರವರಿಂದ ಕರ್ನಾಟಕ ಗ್ರಾಮೀಣ ಬ್ಯಾಂಕ್ ಮೂಡುಗೆರೆ ಶಾಖೆಯಿಂದ ನೀವು ಕರ್ನಾಟಕ ಬ್ಯಾಂಕ್ ಬೇಗಾರು ಶಾಖೆಯ ಖಾತೆಗೆ ದಿನಾಂಕ **17/10/2018** ರಂದು **3** ಲಕ್ಷ ರೂಪಾಯಿ ಹಣವನ್ನು ಹಾಗುಾ ದಿನಾಂಕ **21-02-2022** ರಂದು **4** ಲಕ್ಷ ರೂಪಾಯಿ ಹಣವನ್ನು ಆರ್ ಟಿ ಜಿ ಎಸ್ ಮೂಲಕ ಹಾಗೂ ದಿನಾಂಕ **19-2-2022** ರಂದು **1** ಲಕ್ಷ ರೂಪಾಯಿ ನಗದಾಗಿ ಒಟ್ಟು **08** ಲಕ್ಷ ರೂಪಾಯಿ ಹಣವನ್ನು ಜಮೀನು ಕ್ರಯಪತ್ರ ಮಾಡಿ ಕೊಡುವುದಾಗಿ ನಂಬಿಸಿ ಪಡೆದುಕೊಂಡು ವಂಚಿಸಿದ್ದು, ಆ ಮೇರೆಗೆ ಆರೋಪಿಯಾದ ನೀವು ಭಾರತೀಯ ದಂಡ ಸಂಹಿತೆ ಕಲಂ.**406** ರನ್ವಯ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ.

ಎರಡನೇಯದಾಗಿ ಮೇಲೆ ಹೇಳಿದ ವಿಷಯಕ್ಕೆ ಸಂಬಂಧಪಟ್ಟಂತೆ ಆರೋಪಿಯಾದ ನೀವು ಸಾಕ್ಷಿ-**01** ರವರಿಗೆ ರೂ.**08,00,000/-** ಹಣವನ್ನು ಪಡೆದು ಜಮೀನು ಕ್ರಯಪತ್ರ ಮಾಡಿಕೊಡದೆ ನಂಬಿಕೆ ದ್ರೋಹ ಮಾಡಿದ್ದು , ಆ ಮೇರೆಗೆ ಆರೋಪಿತರಾದ ನೀವುಗಳು ಭಾರತೀಯ ದಂಡ ಸಂಹಿತೆ ಕಲಂ.**417** ರನ್ವಯ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ.

ಪ್ರಶ್ನೆಃ **01** - ಮೇಲೆ ಓದಿ ಹೇಳಿದ ದೋಷಾರೋಪಣೆ ಸಾರಾಂಶ ನಿಮಗೆ ತಿಳಿಯಿತೆ**?**

ಆರೋಪಿಯ ಉತ್ತರಃ

ಪ್ರಶ್ನೆಃ **02** - ಮೇಲ್ಕಂಡ ದೋಷಾರೋಪಣೆಗಳನ್ನು ನೀವುಗಳು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಗೆ ಒಳಪಡಲು ಬಯಸುವಿರಾ**?**

ಆರೋಪಿಯ ಉತ್ತರಃ

(ಮೇಲ್ಕಂಡ ಆಪಾದನೆಯನ್ನುಆರೋಪಿತರಿಗೆ ಓದಿ ಹೇಳಿ ಮೇಲಿನಂತ ಪ್ರಶ್ನಿಸಿ ಅವರು ಹೇಳಿದಂತೆ ಉತ್ತರಗಳನ್ನು ಬರೆದುಕೊಳ್ಳಲಾಯಿತು)

ದಿನಾಂಕಃ **04-07-2024.**

(ಗೀತಾಮಣಿ)
ಹಿರಿಯ ವ್ಯವಹಾರ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ.ಗಳು,ತೀರ್ಥಹಳ್ಳಿ

ಆರೋಪಿಗಳ ಸಹಿಃ